**ವಿಜಯ ಕರ್ನಾಟಕ**

## ಸಮಾನ ಹಕ್ಕುಗಳಿದ್ದರೂ ಕೆಲವರು ಮುಂಚೂಣಿಗೆ ಬರಲು ಹೆಚ್ಚು ಶ್ರಮ ಪಡುವುದೇಕೆ?

# ಕೌಟುಂಬಿಕ ಹಿನ್ನೆಲೆ ಎಂಬ ಅನುಕೂಲತೆ



**ಬದುಕಿನ ಓಟ**

ಸುಧೀಶ್ ವೆಂಕಟೇಶ್

ರಾಷ್ಟ್ರಮಟ್ಟದ ತಂಡದಲ್ಲಿ ಆಡುವ ಆಕಾಂಕ್ಷೆ ಹೊಂದಿದ್ದ ಪ್ರತಿಭಾವಂತ ಕ್ರಿಕೆಟಿಗನೊಬ್ಬ, ಮಾಜಿ ಕ್ರಿಕೆಟಿಗನ ಮಗನೊಬ್ಬನಿಗೆ ಲಭ್ಯವಿದ್ದ ಅನುಕೂಲತೆಗಳಿಗೆ ಹೋಲಿಸಿ, ತನಗಿದ್ದ ಸವಲತ್ತುಗಳ ಕೊರತೆಯ ಬಗ್ಗೆ ವಿಷಾದಿಸುತ್ತಿದ್ದುದರ ಕುರಿತು ನಾನು ಇತ್ತೀಚೆಗೆ ಓದುತ್ತಿದ್ದೆ. ಮಾನವ ಸಂಪನ್ಮೂಲ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ನನ್ನ ವೃತ್ತಿಯು ನನಗೆ ಅನೇಕ ಉದ್ಯೋಗಾಕಾಂಕ್ಷಿಗಳು ಮತ್ತು ವಿದ್ಯಾರ್ಥಿಗಳೊಡನೆ ಮುಖಾಮುಖಿಯಾಗುವ, ಅವರ ಕಥೆಗಳನ್ನು ಕೇಳುವ ಅವಕಾಶ ಕಲ್ಪಿಸಿಕೊಟ್ಟಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಏಕರೂಪದ ಕಾನೂನಾತ್ಮಕ ಹಕ್ಕುಗಳನ್ನು ಹೊಂದಿದ್ದರೂ ನಮ್ಮ ಹುಟ್ಟಿನ ಸಂದರ್ಭ ಮತ್ತು ಸನ್ನಿವೇಶಗಳು ನಮ್ಮ ಇಡೀ ಜೀವನವನ್ನು ರೂಪಿಸುತ್ತದಲ್ಲದೇ ನಮ್ಮ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಅವಕಾಶಗಳನ್ನೂ ನಿರ್ಧರಿಸುತ್ತವೆ ಎಂಬುದು ಈ ಸಂವಾದಗಳಿಂದ ನನಗೆ ಸ್ಪಷ್ಟವಾದವು. ಅದೇ ರೀತಿ, ತಮ್ಮ ಹುಟ್ಟಿನಿಂದಾಗಿ ಕೆಲವರು ಎದುರಿಸುವ ಸಮಸ್ಯೆಗಳ ಸರಮಾಲೆ, ಬದುಕಿನ ವಿವಿಧ ಸನ್ನಿವೇಶಗಳು ಅವರನ್ನು ವಂಚಿತರನ್ನಾಗಿ ಮಾಡಿದ ಪರಿ ಮತ್ತು ಇದೆಲ್ಲದರ ಹೊರತಾಗಿಯೂ ಅವರು ತಮ್ಮ ಮೇಲೆ ತಮಗಿರುವ ದೃಢವಿಶ್ವಾಸದಿಂದ ಮತ್ತು ಸಕಾರಾತ್ಮಕ ಮನೋಭಾವದಿಂದ ಎಷ್ಟು ಸಾಧ್ಯವೋ ಅಷ್ಟು ಉತ್ತಮ ಜೀವನ ನಡೆಸುತ್ತಿದ್ದಾರೆ ಎಂಬ ವಿಚಾರ ನನಗೆ ಬೆರಗು ಸೃಷ್ಟಿಸಿದೆ.

ಇಂದು ಪಶ್ಚಿಮ ಯುರೋಪ್, ಸ್ಕ್ಯಾಂಡಿನೇವಿಯನ್ ದೇಶಗಳು, ನ್ಯೂಜಿಲೆಂಡ್ ಅಥವಾ ಸಿಂಗಾಪುರದಲ್ಲಿ ಜನಿಸಿದ ಮಗುವಿಗೆ ಹೋಲಿಸಿದರೆ; ಯುದ್ಧ ಹಾಗೂ ಹಾನಿಗೊಳಗಾದ ಉಕ್ರೇನ್ ಅಥವಾ ಇತ್ತೀಚೆಗೆ ಪ್ರವಾಹದಿಂದ ತತ್ತರಿಸಿರುವ ಪಾಕಿಸ್ತಾನ ಅಥವಾ ಕ್ಷಾಮ-ಪೀಡಿತ ಆಫ್ರಿಕಾದಲ್ಲಿ ಜನಿಸಿದ ಮಗುವಿಗಿರುವ ಇರುವ ಅವಕಾಶಗಳು ಬೇರೆಯದೇ ಆಗಿವೆ. ಭಾರತದಂಥ ಒಂದು ದೇಶವನ್ನು ತೆಗೆದುಕೊಂಡರೂ ಹುಟ್ಟಿನಿಂದ ಅರ್ಥಾತ್ ಕೌಟುಂಬಿಕ ಹಿನ್ನೆಲೆಯಿಂದ ದೊರಕುವ ಅನೇಕ ಸವಲತ್ತುಗಳು ಜೀವನದಲ್ಲಿ ದೊರಕುವ ಅವಕಾಶಗಳನ್ನು ನಿರ್ಧರಿಸುತ್ತವೆ- ಅವು ಲಿಂಗ, ವರ್ಗ, ಜಾತಿ, ಚರ್ಮದ ಬಣ್ಣ, ಆರೋಗ್ಯಾವಕಾಶಗಳ ಲಭ್ಯತೆ ಮತ್ತು ಪಿನ್‌ಕೋಡ್ ಕೂಡ ಆಗಿರಬಹುದು!

ಕಷ್ಟದಲ್ಲಿರುವ ಕುಟುಂಬಗಳಲ್ಲಿ ಜನಿಸಿದವರಿಗೆ ಆ ಕಷ್ಟಗಳ ಸಂಕೋಲೆಯಿಂದ ತಪ್ಪಿಸಿಕೊಂಡು ಅವಕಾಶ ಮತ್ತು ಸವಲತ್ತುಗಳು ಲಭ್ಯವಿರುವ ಇನ್ನೊಂದು ನೆಲೆಗೆ ತಲುಪಿ ತಮ್ಮ ಸಂಪೂರ್ಣ ಕುಟುಂಬವನ್ನೂ ಆ ನೆಲೆಗೆ ಕೊಂಡೊಯ್ಯುವುದು ಕಠಿಣಕರ. ಉದಾ: ವಿಶ್ವದಲ್ಲಿ ಆದಾಯದ ಅಸಮಾನತೆಗಳಲ್ಲಿ ಅತ್ಯಂತ ಕಡಿಮೆ ಆದಾಯ ಅಸಮಾನತೆಯ ಸರಾಸರಿ ಹೊಂದಿರುವ ಡೆನ್ಮಾರ್ಕ್‌ನಂಥ ದೇಶದಲ್ಲಿ ಕೂಡ, ಕಡಿಮೆ ಆದಾಯದ ಕುಟುಂಬದಲ್ಲಿ ಜನಿಸಿದವರಿಗೆ ತಮ್ಮ ಸಮಾಜದಲ್ಲಿ ಇತರರಂತೆ ಸರಾಸರಿ ಆದಾಯವನ್ನು ಪಡೆಯಲು ಎರಡು ತಲೆಮಾರುಗಳ ಅವಧಿ ಬೇಕಾಗುತ್ತದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ, ಇದು ಐದು ತಲೆಮಾರುಗಳ ಅವಧಿ ತೆಗೆದುಕೊಳ್ಳುತ್ತದೆ. ಸೈದ್ಧಾಂತಿಕವಾಗಿ ನೋಡುವುದಾದರೆ ಮುಕ್ತ ಮಾರುಕಟ್ಟೆಗಳು ಈ ಅಸಮಾನತೆಯನ್ನು ತೊಡೆದುಹಾಕಬೇಕು. ಆದರೆ, ಕಳೆದ ಕೆಲವು ದಶಕಗಳಲ್ಲಿ ಪ್ರಪಂಚದಲ್ಲಿ ಕಂಡುಬಂದಿರುವ ಸನ್ನಿವೇಶ ಬಹಳ ವಿಭಿನ್ನವಾಗಿದೆ. ಅಸಮಾನತೆಗಳು ಇನ್ನಷ್ಟು ಹೆಚ್ಚಿದ್ದು, ಎಲ್ಲೋ ಕೆಲವು ಮಂದಿ ಶ್ರೀಮಂತರಾಗಿದ್ದರೆ ಬಹುತೇಕ ಮಂದಿ ಬಡವರಾಗಿ ಉಳಿದಿದ್ದಾರೆ.

ಈ ಸವಲತ್ತು ವಾಸ್ತವದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ? ಅದೃಷ್ಟವಂತರಾಗಿ ಜನಿಸಿದವರು ಕೇವಲ ಭೌತಿಕ ಸವಲತ್ತುಗಳನ್ನು ಮಾತ್ರವಲ್ಲ, ಸಾಮಾಜಿಕ, ಮಾನಸಿಕ ಮತ್ತು ಭಾವನಾತ್ಮಕ ಸವಲತ್ತುಗಳನ್ನೂ ಪಡೆದಿರುತ್ತಾರೆ. ಉದಾ: ಸೌಂದರ್ಯ, ಭೌತಿಕ ಆಕರ್ಷಣೆ, ಸಂಭಾಷಣಾ ಶೈಲಿ, ನಡವಳಿಕೆಗಳ ವಿಷಯದಲ್ಲಿ ಸಮಾಜವು ನಿರಂತರವಾಗಿ ರೂಢಿಗತ ಮಾನದಂಡಗಳನ್ನು ಹೇರುತ್ತಿರುತ್ತದೆ. ಈ ವಿಶೇಷ ಸವಲತ್ತುಗಳ ವಲಯದಿಂದ ಹೊರಗಿರುವವರನ್ನು ನಿರಂತರವಾಗಿ ಈ ಮೇಲೆ ತಿಳಿಸಿದ ಅಂಶಗಳ ಆಧಾರದ ಮೇಲೆಯೇ ನಿರ್ಣಯಿಸಲಾಗುತ್ತಿದ್ದು ಈ ರೂಢಿಗತ ಮಾನದಂಡಗಳು ಅವರಲ್ಲಿರುವುದು ವಿರಳ.



ಸವಲತ್ತುಗಳು ಅವಕಾಶ ಮತ್ತು ಮಾರ್ಗದರ್ಶನದ ಲಭ್ಯತೆಗೆ ತನ್ನದೇ ಆದ ನೆಟ್ವರ್ಕ್ ರಚಿಸಿಕೊಂಡಿರುತ್ತದೆ. ಉದಾ: ಐವಿ ಲೀಗ್ ವಿಶ್ವವಿದ್ಯಾನಿಲಯಗಳಲ್ಲಿ, ವಂಶಾವಳಿ ಪ್ರವೇಶಗಳಿಗೆ (ಅಂದರೆ, ಅದೇ ಸಂಸ್ಥೆಯಿಂದ ಪದವಿ ಪಡೆದವರ ಕುಟುಂಬಗಳಿಗೆ ಸೇರಿರುವವರು) ಶೇ.33 ಪ್ರವೇಶಾತಿ ಅವಕಾಶ ನೀಡಿದರೆ, ಉಳಿದವರಿಗೆ ನೀಡುವ ಪ್ರವೇಶಾತಿ ಶೇ.8ಕ್ಕಿಂತ ಕಡಿಮೆಯಾಗಿದೆ. ಸವಲತ್ತು ಪಡೆದವರು ಆದಿವಾಸಿ, ದಲಿತ ಅಥವಾ ತೃತೀಯ ಲಿಂಗಿಗಳಂತೆ ಸಮಾಜದಿಂದ ನಿರಾಕೃತರಾಗುವುದಿಲ್ಲ.

ಸವಲತ್ತು ಪಡೆದವರು ರೋಲ್ ಮಾಡೆಲ್‌ಗಳ ನಡುವೆ ಸುಭಿಕ್ಷ ಕೌಟುಂಬಿಕ ವಾತಾವರಣದಲ್ಲಿ ಬೆಳೆಯುತ್ತಾರೆ. ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವಿಶೇಷ ಸವಲತ್ತು ವರ್ಗಾವಣೆಯಾಗುವುದರಲ್ಲಿ ಆಶ್ಚರ್ಯವೇನಿಲ್ಲ- ವಾಸ್ತುಶಿಲ್ಪಿಗಳು, ವೈದ್ಯರು ಅಥವಾ ವಕೀಲರು ಸಾಮಾನ್ಯವಾಗಿ ತಮ್ಮ ವೃತ್ತಿಯಲ್ಲಿ ವಂಶಾನುಗತವಾಗಿ ಯಶಸ್ವಿಯಾಗುತ್ತಾರೆ. ಅವರು ಯಶಸ್ಸಿನ ರಹಸ್ಯ ತಿಳಿದುಕೊಳ್ಳುತ್ತಲೇ ಬೆಳೆಯುತ್ತಾರೆ, ಮತ್ತು ಅವರಿಗೆ ಯಶೋಗಾಥೆಗಳನ್ನು ತಲೆಗೆ ತುಂಬಿಸಲಾಗಿರುತ್ತದೆ, ಇದು ಪ್ರತಿಕೂಲ ಸಮಯದಲ್ಲೂ ತಮ್ಮ ಜೀವನವನ್ನು ಪುನರ್ ನಿರ್ಮಿಸಿಕೊಳ್ಳಲು ಅವರಿಗೆ ಆತ್ಮವಿಶ್ವಾಸ ನೀಡುತ್ತದೆ. ಸವಲತ್ತು ಹೊಂದಿರುವವರಿಗೆ ಇದು ತಿಳಿದಿರುತ್ತದೆ. ಆದರೆ, ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಾರೆ.

ಅಸಾಧ್ಯ ಕಷ್ಟಗಳನ್ನು ಜಯಿಸಿದ ಜನರನ್ನು ನಾನು ಆಗಾಗ್ಗೆ ಸಂದರ್ಶಿಸುತ್ತೇನೆ. ಅವರನ್ನು ರೂಪಿಸಿರುವ ಅಂಶ ಯಾವುದು? ನಾನು ಎರಡು ಅಂಶಗಳನ್ನು ಕಂಡುಕೊಂಡೆ ಅದು ಆಶಾವಾದ ಮತ್ತು ಪರಿಶ್ರಮ. ಅವರು ಹುಟ್ಟಿನಿಂದಲೇ ತಮ್ಮ ಪರಿಸ್ಥಿತಿಗಳಿಂದ ಹಾಗೆ ರೂಪುಗೊಂಡಿರಬಹುದು ಎಂದು ಅವರು ನಂಬುತ್ತಾರೆ. ಆದರೆ ಅವರು ಅದನ್ನೆಲ್ಲ ವ್ಯಾಖ್ಯಾನಿಸಲು ಹೋಗುವುದಿಲ್ಲ, ಅಂಥ ಅಭ್ಯರ್ಥಿಗಳನ್ನು ಸಂದರ್ಶಿಸುವಾಗ ನಾನು 3 ಮಾರ್ಗದರ್ಶಿ ತತ್ವಗಳನ್ನು ಬಳಸುತ್ತೇನೆ:

- ಅಭ್ಯರ್ಥಿಯು ಜೀವನದಲ್ಲಿ ತನಗೆ ಸಿಕ್ಕ ಅವಕಾಶಗಳನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆಯೇ? ಅವಕಾಶಗಳು ಅಸಮಾನವೆಂದು ನನಗೆ ತಿಳಿದಿರುವ ಕಾರಣ ನಾನು ಸಾಧನೆಗೆ ಹೆಚ್ಚು ಗಮನ ನೀಡುವುದಿಲ್ಲ,
- ಅವರ ಹಾದಿ ಯಾವುದು? ಅಭ್ಯರ್ಥಿಯು ಉತ್ತಮವಾಗಿ ಕಾರ್ಯನಿರ್ವಹಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆಯೇ?
- ಅಭ್ಯರ್ಥಿಯು ಇತರರಿಗೆ ಅವಕಾಶಗಳನ್ನು ಸೃಷ್ಟಿಸುವುದು ತನ್ನ ಜವಾಬ್ದಾರಿ ಎಂದು ಭಾವಿಸುತ್ತಾರೆಯೇ?

ವ್ಯವಸ್ಥೆಯ ಹಂತದಲ್ಲಿ ಎಲ್ಲರಿಗೂ ಸಮಾನ ಅವಕಾಶವನ್ನು ಉತ್ತೇಜಿಸುವ ನೀತಿಗಳು ಮತ್ತು ಕಾರ್ಯಕ್ರಮಗಳು ಅಗತ್ಯವಿದೆ ಎಂಬ ವಿಚಾರದ ಕುರಿತು ರಾಜಕೀಯ ನೆಲೆಯಲ್ಲಿ ಒಮ್ಮತವಿದೆ. ಸವಲತ್ತು ವಂಚಿತ ಜನರಿಗೆಂದೇ ಉದ್ದೇಶಿತ ಬೆಂಬಲ ಮತ್ತು ಸಂಪನ್ಮೂಲಗಳಿವೆ. ಸಾರ್ವತ್ರಿಕ ಶಿಕ್ಷಣ, ಕೈಗೆಟಕುವ ದರದ ಆರೋಗ್ಯ, ತಾರತಮ್ಯರಹಿತ ಅಭ್ಯಾಸಗಳು ಮತ್ತು ಹಲವಾರು ಸಾಮಾಜಿಕ ಸೇವೆಗಳು ಇವೆಲ್ಲವೂ ಈ ನಿಟ್ಟಿನಲ್ಲಿ ಮಾಡಲಾಗಿರುವ ಪ್ರಯತ್ನಗಳಾಗಿವೆ. ನಿಖರವಾಗಿ ಹೇಳುವುದಾದರೆ, ನನಗೆ ಗೊತ್ತಿರುವ ಹಾಗೆ ಕೆಲವು ಪ್ರಬುದ್ಧ ಮತ್ತು ಪ್ರಗತಿಪರ ವಿಶ್ವವಿದ್ಯಾನಿಲಯಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಎಲ್ಲರಿಗೂ ಮುಕ್ತ ಅವಕಾಶಗಳನ್ನು ಒದಗಿಸುತ್ತವೆ. ತಮ್ಮ ನಾಯಕರುಗಳಿಗೆ ಪಕ್ಷಪಾತ ಮತ್ತು ಪೂರ್ವಗ್ರಹಗಳನ್ನು ಪ್ರಶ್ನಿಸಲು ಮತ್ತು ಒಳಗೊಳ್ಳುವಿಕೆಯ ಕುರಿತು ಹೆಚ್ಚು ಜಾಗೃತರಾಗಿ ಕಾರ್ಯ ನಿರ್ವಹಿಸಲು ತರಬೇತಿ ನೀಡುವ ನಿಟ್ಟಿನಲ್ಲಿ ಅನೇಕ ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆಗಳನ್ನೂ ಬಲ್ಲೆ.

ಯಶಸ್ಸನ್ನು ಪಡೆಯಲು ಪ್ರತಿಯೊಬ್ಬರೂ ಸಮಾನವಾಗಿ ಅರ್ಹರು ಮತ್ತು ನಮ್ಮ ಜೀವನವನ್ನು ನಮ್ಮ ಕೌಟುಂಬಿಕ ಹಿನ್ನೆಲೆ ನಿರ್ಧರಿಸಬಾರದು. ಇದು ಆಧುನಿಕ ಪ್ರಜಾಸತ್ತಾತ್ಮಕ ಸಮಾಜದ ತಳಹದಿಯಾಗಿದೆ.

**(ಲೇಖಕರು: ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಮುಖ್ಯ ಸಂವಹನ ಅಧಿಕಾರಿ)**